# ಶ್ರೀಸಂಸಾರಿಯೇ ಮಾದರಿ

ಸಾಹಸ ಸಿಂಹ ಎನ್ನುತ್ತೇವೆ. ಕೆರಳಿದ ಸಿಂಹ ಎನ್ನುತ್ತೇವೆ. ಸಿಂಹ ಗರ್ಜನೆ ಎನ್ನುತ್ತೇವೆ. ಇವೆಲ್ಲ ವಿಶೇಷಣಗಳು ಸಿಂಹದ ಕ್ರೌರ್ಯವನ್ನು ಸೂಚಿಸುವಂತಹವು. ವ್ಯಕ್ತಿವಿಶೇಷವನ್ನು ಬಣ್ಣಿಸುವಾಗ ಕ್ರೌರ್ಯ ಒದಗಿಬರುತ್ತಿದೆ. ಯಾಕೆ ಹೀಗೆ? ಸಿಂಹ ನಮಗೆ ಮುಖ್ಯವಾಗಬೇಕಾದುದು ಅದರ ಗಾಂಭೀರ್ಯದ ಮೂಲಕ. ಆದರೆ, ಆ ಗಾಂಭೀರ್ಯದ ಬದಲು ಪಶುಶಕ್ತಿಗೆ ಹೆಚ್ಚಿನ ಮಹತ್ವ ಕೊಡುತ್ತಿದ್ದೇವೆ. ಈ ಪಶುಶಕ್ತಿಯ ಮೋಹ ನಮ್ಮೊಳಗಿನ ಬಯಕೆಯನ್ನು ಸಂಕೇತಿಸುತ್ತಿದೆಯೆ?

ಸಿಂಹದ ವಿಚಾರ ಬಿಡಿ. ಮೇಲ್ನೋಟಕ್ಕೆ ಎದ್ದುಕಾಣುತ್ತಿರುವ ಸಾಮಾಜಿಕ ಸಂಕೇತಗಳನ್ನು ಗಮನಿಸಿ. ಸಲಗ, ಸಿಂಹ, ಗಿಡುಗ, ಕಿರುಬ, ಹಾವುಗಳೆಲ್ಲ ಮನುಷ್ಯನ ಶೌರ್ಯಪ್ರದರ್ಶನದ ಅಥವಾ ಸಾಹಸ ಮನೋಭಾವದ ಬಣ್ಣನೆಗೆ ಬಳಕೆಯಾಗುತ್ತಿವೆ. ವೀರನೆಂದರೆ ಎದೆಯುಬ್ಬಿಸಿ ನಡೆಯಬೇಕು, ಎದೆ ವಿಶಾಲವಾಗಿರಬೇಕು, ರಟ್ಟೆಗಳಲ್ಲಿ ಮಡಿಕೆಗಳು ಬೀಳಬೇಕು – ಇದು ಕಲಿತನದ ಕುರಿತ ನಮ್ಮ ನಂಬಿಕೆ. ದೇಹದಿಂದ ಮಾತಿಗೂ ಶೌರ್ಯದ ಸೋಂಕು ತಗುಲಿದೆ. ಮಾತೀಗ ಮತಾಪು; ಮನಸ್ಸುಗಳನ್ನು ಕೂಡಿಸುವುದರ ಬದಲಿಗೆ, ಛಿದ್ರವಾಗಿಸುವ ತೋಪು. ಇದೆಲ್ಲ ಮನುಷ್ಯರ ಪಾಡಾಯಿತು. ದೇವರುಗಳ ಪಾಡು ನೋಡಿ. ರಾಮ ಧನುರ್ಧಾರಿಯಾಗಿದ್ದಾನೆ. ಈ ಹೊತ್ತಿನ ರಾಮನ ಚಿತ್ರಪಟಗಳನ್ನು, ಪ್ರತಿಮೆಗಳನ್ನು ನೋಡಿದರೆ – ಬಿಲ್ಲುಬಾಣಗಳ ಠೇಂಕಾರ ಬಿಂಬದಿಂದ ಜೀವಗೊಂಡು ಮೈಮನಗಳಿಗೆ ಘಟ್ಟಿಸುವ ಆತಂಕ ಹುಟ್ಟಿಸುವಂತಿರುತ್ತದೆ. ರಾಮನೆಂದರೆ ಭಾರತೀಯರ ಪಾಲಿಗೆ 'ಸೀತಾರಾಮ'. ಕುಟುಂಬಪ್ರೇಮವನ್ನು ಸಂಕೇತಿಸುವ ರಾಮ, ಆಧುನಿಕ ಭಾರತದಲ್ಲಿ ಶೌರ್ಯದ ಸಂಕೇತವಾಗಿದ್ದಾನೆ. ರಾಮನಲ್ಲಿ ಬದಲಾವಣೆ ಉಂಟಾದ ಮೇಲೆ, ಆತನ ಬಂಟ ಹನುಮಂತ ಯಥಾಸ್ಥಿತಿಯಲ್ಲಿರುವುದು ಅಸಹಜವಷ್ಟೇ. ಹನುಮನ ಅಮಾಯಕತೆ ಹಾಗೂ ಭಕ್ತಿಯ ಪರವಶತೆಯ ಜಾಗದಲ್ಲೀಗ ಯಾವುದೋ ಆವೇಗ ಸೇರಿಕೊಂಡಿದೆ. ಹನುಮಂತನ ಮುಖದಲ್ಲಿ ಭಕ್ತಿ ಕಾಣಿಸುತ್ತಿಲ್ಲ; ಸಿಟ್ಟಿನ ಶಕ್ತಿ ಒಡೆದುಕಾಣಿಸುತ್ತಿದೆ. 'ನಮ್ಮ ಅಳತೆಯನ್ನು ಮೀರಲಾಗದ ದೇವರು' ಎಂದು ಶಿವರಾಮ ಕಾರಂತರು ಹೇಳಿದ್ದು ಇದನ್ನೇ. ನಮ್ಮ ನಂಬಿಕೆ–ಚಹರೆಗಳು ಬದಲಾದಂತೆ 'ನಮ್ಮ ದೇವರು' ಬದಲಾಗಿದ್ದಾರೆ.

ಬದಲಾವಣೆ ಸಹಜ. ಆದರೆ, ಕುಟುಂಬಪ್ರೇಮಕ್ಕಿಂತಲೂ ಶೌರ್ಯವನ್ನು ಮುಂದು ಮಾಡುವ, ಭಕ್ತಿಗಿಂತಲೂ ಶಕ್ತಿಯನ್ನು ಚಲಾವಣೆಗೆ ತರುವ ಬದಲಾವಣೆ ಇದೆಯಲ್ಲ, ಅದು ಭಾರತೀಯ ಮನಸ್ಸುಗಳಿಗೆ ಸಹಜವಾದುದೇನಲ್ಲ. ಚರಿತ್ರೆಯೆನ್ನುವುದು ಒಬ್ಬರು ಇನ್ನೊಬ್ಬರನ್ನು ಹತ್ತಿಕ್ಕಿದ ಕಥನಗಳು. ಈ ಸಾಮ್ರಾಜ್ಯಶಾಹಿ ಕಥನಗಳಿಗೆ ಪರ್ಯಾಯವಾಗಿ ಭಾರತೀಯ ಸಮಾಜ ಕುಟುಂಬಕೇಂದ್ರಿತ ವ್ಯವಸ್ಥೆಯೊಂದನ್ನು ಮುಂದು ಮಾಡಿಕೊಂಡು ಬಂದಿದೆ. ಕುಟುಂಬ ಕೇಂದ್ರಿತವಾದ ಈ ವ್ಯವಸ್ಥೆ ನೆತ್ತರನ್ನು ಆಧರಿಸಿದ್ದಲ್ಲ, ಅಂತಃಕರಣವನ್ನು ಅವಲಂಬಿಸಿದ್ದು. ಸೈರಣೆ ಮತ್ತು ವಾತ್ಸಲ್ಯ ಈ ವ್ಯವಸ್ಥೆಯ ಲಕ್ಷಣಗಳು. ವರ್ತಮಾನದ ಭಾರತದಲ್ಲಿ ಆಗಿರುವ, ಆಗುತ್ತಿರುವ ಬದಲಾವಣೆಗಳು 'ಭಾರತದ ಅಂತಃಕರಣದ ಅಂತರ್ಜಲ'ಕ್ಕೆ ಸವಾಲು ಹಾಕುತ್ತಿರುವಂತೆ ಕಾಣಿಸುತ್ತಿದೆ.

ಎಚ್.ಎಸ್. ವೆಂಕಟೇಶಮೂರ್ತಿ ಅವರ ಕವಿತೆಯೊಂದಿದೆ, 'ಶ್ರೀಸಂಸಾರಿ' ಹೆಸರಿನದು. ಸದ್ಯಕ್ಕೆ ಅಷ್ಟೇನೂ ಜನಪ್ರಿಯವಲ್ಲದ 'ಗ್ರೂಪ್ ಫೋಟೊ'ದ– ಅವಿಭಕ್ತ ಕುಟುಂಬದ– ಪರಿಕಲ್ಪನೆಯನ್ನು ಹೊಳೆಯಿಸುವ ಈ ಪದ್ಯ, ಭಾರತೀಯ ಸಮಾಜದ ನಿಜಹೃದಯವನ್ನು ಕಾಣಿಸುವ ಹಂಬಲದ್ದು. ಪದ್ಯದ ಕಥನ ರಾಮಾಯಣ ಯುದ್ಧಾನಂತರದ್ದು. ರಾವಣನನ್ನು ಕೊಂದು, ರಾಮ ಅಯೋಧ್ಯೆಯ ಅರಸನಾಗಿದ್ದಾನೆ. ನೋಡುವ ಕಣ್ಣುಗಳಿಗೆ ರಾಮನ ಭವ್ಯಮೂರ್ತಿ ಹಬ್ಬವಿದ್ದಂತೆ. ಆ ಬಿಂಬವಾದರೂ ಎಂತಹದು: ಪ್ರಭುವಿನ ಎಡಬದಿಗೆ ಸೀತಮ್ಮ; ಬಲಗಡೆಗೆ ಒಡಹುಟ್ಟು ಲಕ್ಷ್ಮಣ; ಮುಂಭಾಗದಲ್ಲಿ 'ಹನುಮನ ಪ್ರಾಣ ಪ್ರಭು ರಘು ರಾಮ' ಎನ್ನುವ ಭಾವದಲ್ಲಿ ಕೂತಿರುವ ಆಂಜನೇಯ. ಇಷ್ಟು ಸುಂದರವಾದ ಕೌಟುಂಬಿಕ ಚಿತ್ರ ವಿಶ್ವದಲ್ಲಿ ಮತ್ತೊಂದಿರಲಾರದು. ಇಂಥ ಅಪೂರ್ವ ದೃಶ್ಯದಲ್ಲೂ ಕವಿಗೆ ಕೊರತೆ ಕಂಡಿದೆ, ಅಳಿಲಿನ ಮೂಲಕ. ಲಂಕೆಗೆ ಸೇತುವೆ ಕೊಟ್ಟಾಗ ಅಳಿಲುಸೇವೆ ಸಲ್ಲಿಸಿದ ಪುಟ್ಟಜೀವ ತನ್ನ ಆರಾಧ್ಯದೈವದ ಸಂತಸದ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಅಯೋಧ್ಯೆಯ ಒಡ್ಡೋಲಗಕ್ಕೆ ಬಂದಿದೆ. ಸೀತಾ ಲಕ್ಷ್ಮಣ ಹನುಮ ಸಮೇತ ಪ್ರಭುವನ್ನು ನೋಡಿದಾಗ, ಆ ಕುಟುಂಬದಲ್ಲಿ ತನಗೂ ಸ್ಥಾನ ದೊರೆಯಬೇಕೆಂದು ಅಳಿಲಿಗೆ ಆಸೆಯಾಗುತ್ತದೆ. ಆಗ ಅದು ಸಲ್ಲಿಸುವ ಬಿನ್ನಹ: 'ಹೆಗಲ ಬಿಲ್ಲು ಕೆಳಗಿಳಿಸಿರಿ ಸ್ವಾಮಿ, ಜಾಗ ಉಂಟು ಇನ್ನೊಬ್ಬರಿಗೆ! / ರಾಮ ಧ್ಯಾನಿಸಿದ: ಮರುಕ್ಷಣ ಅಳಿಲಿದೆ ಆತನ ಹೆಗಲಲ್ಲಿ.' ಆಹಾ! ಎಂಥ ಸುಂದರ ಕಲ್ಪನೆ.

ಅಳಿಲು ಹೆಗಲೇರುವುದರೊಂದಿಗೆ ರಾಮನ ಸಂಸಾರ ಪೂರ್ಣಗೊಂಡಂತಾಯಿತು. ಅಷ್ಟು ಮಾತ್ರವಲ್ಲ, ಅಳಿಲು ಹೆಗಲೇರಿದ್ದರ ಜೊತೆಗೆ ಬಿಲ್ಲು ಕೆಳಗಿಳಿದದ್ದನ್ನೂ ಸಹೃದಯರು ಗಮನಿಸಬೇಕು. ಅರ್ಥವಿಷ್ಟೇ: ರಾಮ ನಮಗೆ ದಕ್ಕಬೇಕಾದುದು ಕುಟುಂಬವತ್ಸಲನಾಗಿಯೇ ಹೊರತು, ಧನುಸ್ಸು ಧರಿಸಿದ ಶೂರನಾಗಲ್ಲ. ನಮ್ಮ ಬದುಕಿಗೆ ರಾಮನ ಮೂಲಕ ದಕ್ಕಬೇಕಾದುದು ಪ್ರೇಮವೇ ಹೊರತು ಶೌರ್ಯವಲ್ಲ. ಇಷ್ಟಕ್ಕೂ ಪ್ರೇಮಕ್ಕೂ ಮಿಗಿಲಾದ ಶೌರ್ಯ ಈ ಜಗತ್ತಿನಲ್ಲಿ ಎಲ್ಲಿದೆ? ಬುದ್ಧ, ಗಾಂಧಿಗೆ ಮಿಗಿಲಾದ ಶೌರ್ಯವಂತರುಂಟೆ ಇಳೆಯೊಳು.

ಅಳಿಲಿಗೆ ನಮ್ಮ ಬದುಕಿನಲ್ಲಿ ಸ್ಥಾನ ಬೇಕು. ಅಳಿಲಿನ ರೂಪದ ದೀನರಿಗೆ ನಮ್ಮ ಹೃದಯ ತೆರೆದುಕೊಂಡಿರಬೇಕು ಎನ್ನುವ 'ಶ್ರೀಸಂಸಾರಿ'ಯದು – ಬದಲಾವಣೆಯ ಚಕ್ರಕ್ಕೆ ಸಿಲುಕದೆ, ಯಾವತ್ತಿಗೂ ಹಳತಾಗಬಾರದ ಪರಿಕಲ್ಪನೆ. ರಾಮನ ಕುಟುಂಬ ರಾಜಮನೆತನದ ಪರಿವಾರಕ್ಕಷ್ಟೇ ಸೀಮಿತವಾದುದಲ್ಲ. ಅಲ್ಲಿ ಹನುಮನಿದ್ದಾನೆ, ಶಬರಿಯಿದ್ದಾಳೆ, ಜಾಂಬವಂತನಿದ್ದಾನೆ. ಹಲವು ಭಾವ–ಬಣ್ಣಗಳ ಈ ಕುಟುಂಬ ಬಹುತ್ವವನ್ನು ಪ್ರತಿನಿಧಿಸುವಂತಹದ್ದು. ಹನುಮನ ಎದೆಯಲ್ಲಿ ರಾಮನಿದ್ದಂತೆ, ರಾಮನ ಹೃದಯದಲ್ಲಿ ಇಣುಕಿದರೆ ಇಣಚಿಯೇ ಕಾಣಬಹುದೇನೊ? ಹಾಗೆ ಕಾಣಲಿಕ್ಕೆ ಬೇಕಾದುದು ಮನುಷ್ಯತ್ವದ ಕಣ್ಣು. ಆ ಕಣ್ಣು ದೊರೆಯುವುದು ಎಲ್ಲಿಂದ? ಕವಿ, ಕಲೆ ಮತ್ತು ಬದುಕು ಕರುಣಿಸುವ ಅರಿವಿನಿಂದ. ಆ ಅರಿವು ಬೇಡ ಎಂದರೆ ನಾವು ಮನುಷ್ಯರಾಗಿ ಉಳಿದೇವೆಯೆ?

ಮಾತು ಮತ್ತು ನೋಟಕ್ಕೆ ದಕ್ಕುವ ಸಿಂಹದಲ್ಲಿ ನಮಗೆ ಮೃಗರಾಜನ ಗಾಂಭೀರ್ಯ ಮತ್ತು ಘನತೆ ಮುಖ್ಯವಾಗಬೇಕೆ ಹೊರತು, ಕ್ರೌರ್ಯವಲ್ಲ, ಪಶುಬಲವಲ್ಲ.

■ **ಚಂಪಕಮಾಲಾ**

## ಮಾತೇ ಮುತ್ತು

- ಎಲ್ಲರನ್ನೂ ಪ್ರೀತಿಸುವ. ಕೆಲವರನ್ನಷ್ಟೇ ನಂಬು, ಯಾರಿಗೂ ಕೇಡು ಬಗೆಯಬೇಡ. ಇದುವೇ ಜೀವನದ ನಿಜ ಸೂತ್ರ.

  –ಶೇಕ್ಸ್‌ಪಿಯರ್
- ನೀವು ಒಬ್ಬರೇ ಇದ್ದಾಗ ಆಲೋಚನೆಗಳ ಮೇಲೆ ನಿಗಾ ಇರಲಿ. ಗುಂಪಿನಲ್ಲಿ ಇದ್ದಾಗ ಮಾತುಗಳ ಮೇಲೆ ನಿಗಾ ಇರಲಿ.

  –ಅನಾಮಿಕ
- ಏನಾದರೂ ಆಗಲಿ ಮದುವೆ ಆಗಿ. ಒಳ್ಳೆಯ ಹೆಂಡತಿ ಸಿಕ್ಕರೆ ನೀವು ಸುಖವಾಗಿ ಇರುತ್ತೀರಿ. ಗಯ್ಯಾಳಿ ಹೆಂಡತಿ ಸಿಕ್ಕರೆ ಒಳ್ಳೆಯ ತತ್ವಜ್ಞಾನಿ ಆಗುತ್ತೀರಿ.

  –ಸಾಕ್ರೆಟಿಸ್
- ಹೆಚ್ಚು ಹೆಚ್ಚು ಓದಿದಂತೆಲ್ಲ, ನಮ್ಮ ಅಜ್ಞಾನದ ಅರಿವಾಗುತ್ತದೆ.

  –ಪಿ.ಬಿ. ಶೆಲ್ಲಿ
- ದೇಹವನ್ನು ನೀರೊಳು ಅದ್ದಿ ಫಲವೇನು? ಮನದಲ್ಲಿ ದೃಢಭಕ್ತಿ ಇಲ್ಲದಿದ್ದರೆ.

  –ಪುರಂದರ ದಾಸ
- ಮನುಷ್ಯ ಯಾವುದಕ್ಕೂ ಭಯ ಪಡಬೇಕಿಲ್ಲ. ಅದನ್ನು ಅರ್ಥ ಮಾಡಿಕೊಂಡರೆ ಸಾಕು.

  –ಮೇರಿ ಕ್ಯೂರಿ
- ರೂಪ ಕಣ್ಣುಗಳಿಗೆ ಸೀಮಿತ. ಗುಣ ಆತ್ಮದವರೆಗೆ ತಲುಪುವ ಸಾಧನ.

  –ತ್ರಿವೇಣಿ